**ಮೂ.ದಾ.ನಂ.48/2016**

ಪಿ.ಡಬ್ಲ್ಯು.1

(ಇಂದು ದಿನಾಂಕ: **17-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ಸರ್ವೆ ನಂಬರ 316 ಹಿಸ್ಸಾ 3 ವಾದಿಯರ ಸಾಮಾಯಿಕ ಹಕ್ಕಿನ ಸ್ಥಳ ಎಂದರೆ ಸರಿ. ಸದ್ರಿ ಆಸ್ತಿಯಲ್ಲಿ 1 ರಿಂದ 3ನೇ ವಾದಿಯರ ಪ್ರತ್ಯೇಕ ವಾಸ್ತವ್ಯದ ಮನೆಗಳು ಇವೆ ಎಂದರೆ ಸರಿ. ಸರ್ವೆ ನಂಬರ 316 ಹಿಸ್ಸಾ 3 ರ ಪೂರ್ವದಲ್ಲಿ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವುಗಳ ನಡುವೆ ಬೇರೆ ಸರ್ವೆ ನಂಬರಗಳು ಕೂಡ ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರಿದು ಸರ್ವೆ ನಂಬರ 316 ಹಿಸ್ಸಾ 5, 6, 7 ಹಾಗೂ 8 ಬರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಸ್ಥಳಗಳಲ್ಲಿ ಸರ್ವೆ ನಂಬರ 316 ಹಿಸ್ಸಾ 5 ನನ್ನ ಹಾಗೂ ನನ್ನ 3ನೇ ಪ್ರತಿವಾದಿಯ ಸಾಮಾಯಿಕ ಹಕ್ಕಿನ ಸ್ಥಳವಾಗಿದ್ದು, ಉಳಿದ ಹಿಸ್ಸಾಗಳು ನನ್ನ ಚಿಕ್ಕಪ್ಪನ ಮಕ್ಕಳದಾಗಿರುತ್ತದೆ.

ನನ್ನ ಚಿಕ್ಕಪ್ಪನ ಮಕ್ಕಳು ಎಂದರೆ 9ನೇ ಪ್ರತಿವಾದಿ ಅಂದರೆ ವಿನಾಯಕ ನರಸಿಂಹ ಭಟ್ಟ ಹಾಗೂ ಅವನ ತಮ್ಮನಾದಂತಹ ಶ್ರೀಧರ ನರಸಿಂಹ ಭಟ್ಟ ಹಾಗೂ ಬಾಲಚಂದ್ರ ನರಸಿಂಹ ಭಟ್ಟ ಇವರಾಗಿರುತ್ತಾರೆ. ಸರ್ವೆ ನಂಬರ 316 ಹಿಸ್ಸಾ 6 ವಿನಾಯಕ ನರಸಿಂಹ ಭಟ್ಟ ಇವರ ಹೆಸರಿನಲ್ಲಿ ಇದೆ. ಸರ್ವೆ ನಂಬರ 316 ಹಿಸ್ಸಾ 7 ಶ್ರೀಧರ ನರಸಿಂಹ ಭಟ್ಟ ಇವರ ಹೆಸರಿನಲ್ಲಿ ಇದೆ ಹಾಗೂ ಸರ್ವೆ ನಂಬರ 316 ಹಿಸ್ಸಾ 8 ಬಾಲಚಂದ್ರ ನರಸಿಂಹ ಭಟ್ಟ ಇವರ ಹೆಸರಿನಲ್ಲಿ ಇದೆ.

ಸರ್ವೆ ನಂಬರ 314 ಹಿಸ್ಸಾ 1, 2, 3 ಹಾಗೂ 4 ಹಾಗೂ 8 ಸರ್ವೆ ನಂಬರಗಳು ಸರ್ವೆ ನಂಬರ 316 ಹಿಸ್ಸಾ 5 ರಿಂದ 8 ರ ಪೂರ್ವ ದಿಕ್ಕಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವುಗಳ

**ಮೂ.ದಾ.ನಂ.48/2016**

ಪಿ.ಡಬ್ಲ್ಯು 1

ನಡುವೆ ಪ್ರತಿವಾದಿಯರ ಮನೆಗೆ ಓಡಾಡುವ ಒಂದು ಓಣಿ ಇದೆ ಎಂದು ನುಡಿಯುತ್ತಾರೆ. ಷದ್ರಿ ಓಣಿಯಲ್ಲಿ ಎಲ್ಲಾ ಪ್ರತಿವಾದಿಗಳು ಓಡಾಡುತ್ತಾರೆ.

ಸರ್ವೆ ನಂಬರ 314 ಹಿಸ್ಸಾ 1, 1ನೇ ವಾದಿಯ ಹೆಸರಿನಲ್ಲಿ ಇದ್ದು, ಸರ್ವೆ ನಂಬರ 314 ಹಿಸ್ಸಾ 2, 3 ಹಾಗೂ 4, 3 ಹಾಗೂ 4ನೇ ಪ್ರತಿವಾದಿಯರ ಸಾಮಾಯಿಕ ಸ್ಥಳವಾಗಿರುತ್ತದೆ. ಸರ್ವೆ ನಂಬರ 314 ಹಿಸ್ಸಾ 8, 1ನೇ ವಾದಿಯರ ಸ್ಥಳವಾಗಿರುತ್ತದೆ.

ಸರ್ವೆ ನಂಬರ 316 ಹಿಸ್ಸಾ 1, 2ನೇ ವಾದಿಯ ಸ್ಥಳವಾಗಿರುತ್ತದೆ. ಸರ್ವೆ ನಂಬರ 316 ಹಿಸ್ಸಾ 2 ಸುಲೋಚನಾ ಜನಾರ್ಧನ ಭಟ್ಟ ಇವರ ಜಾಗ ಆಗಿರುತ್ತದೆ. ಸರ್ವೆ ನಂಬರ 316 ಹಿಸ್ಸಾ 4 ಗಣೇಶ ಮಂಜುನಾಥ ಹೆಗಡೆ ಇವರ ಸ್ಥಳವಾಗಿರುತ್ತದೆ. ಸರ್ವೆ ನಂಬರ 316 ಹಿಸ್ಸಾ 3 ವಾದಿಯರ ಸಾಮಾಯಿಕ ಹಕ್ಕಿನ ಸ್ಥಳದ ದಕ್ಷಿಣದಲ್ಲಿ ಸರ್ವೆ ನಂಬರ 312 ಹಿಸ್ಸಾ 1 ಜಾಗ ಬರುತ್ತದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ